International Journal of Kannada Research
www.kannadajournal.com

ISSN: 2454–5813
IJKR 2018; 4(2): 153-157
© 2018 IJKR
www.kannadajournal.com
Received: 16-02-2018
Accepted: 17-03-2018

**ಹನುಮಂತಪ್ಪ ಆರ್**
ಸಂಶೋಧನ ವಿದ್ಯಾರ್ಥಿ
ಡಾ.ಆರ್.ಸಿ.ಹಿರೇಮಠ ಕನ್ನಡ
ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ–೦೩

**Correspondence**
**ಹನುಮಂತಪ್ಪ ಆರ್**
ಸಂಶೋಧನ ವಿದ್ಯಾರ್ಥಿ
ಡಾ.ಆರ್.ಸಿ.ಹಿರೇಮಠ ಕನ್ನಡ
ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ–೦೩

# ಕನ್ನಡ ನಾಟಕಗಳ ಪ್ರಾಚೀನತೆ

**ಹನುಮಂತಪ್ಪ ಆರ್**

ಜಗತ್ತಿನ ಪ್ರಾಚೀನ ಸಾಹಿತ್ಯಗಳ ಇತಿಹಾಸವನ್ನು ಪರಿಶೀಲಿಸದರೆ ಗ್ರೀಕ್ ಹಾಗೂ ಸಂಸ್ಕೃತ ಸಾಹಿತ್ಯಗಳು ನಾಟಕಕ್ಕೆ ವಿಶೇಷ ಪ್ರಾಧಾನ್ಯ ಕೊಟ್ಟಿರುವುದು ಕಂಡುಬರುತ್ತದೆ. 'ಕಾವ್ಯೇಷು ನಾಟಕಂ ರಮ್ಯಂ' ಎಂದು ಸಂಸ್ಕೃತ ಸಾಹಿತ್ಯ ಘಂಟಾಘೋಷವಾಗಿ ಸಾರಿತು. ಗ್ರೀಕ್ ಸಾಹಿತ್ಯದ ಅಸ್ತಿತ್ವಕ್ಕೆ ಕಾರಣಕರ್ತರು ಈಸ್ಕಿಲಸ್, ಯುರಿಪೀಡಿಸ್, ಸಾಪೋಕ್ಲಿಸ್ ಮತ್ತು ಅರಿಸ್ಟೋಪೇನಸ್ ಇವರೆಲ್ಲಾ ನಾಟಕಕಾರರು. ಗ್ರೀಕ್‌ರಿಂದ ನಾಟಕವನ್ನು ಭಾರತೀಯರು ಎತ್ತಿಕೊಂಡರೋ ಅಥವಾ ಭಾರತೀಯರಿಂದ ಗ್ರೀಕರು ಎತ್ತಿಕೊಂಡರೊ ಇನ್ನೂ ಚರ್ಚಾಸ್ಪದ ವಿಷಯ. ಭಗವಂತನನ್ನು 'ಜಗನ್ನಾಟಕ ಸೂತ್ರಧಾರಿ' ಎಂದು ಕರೆದು ತಮ್ಮ ಆರಾಧ್ಯಮೂರ್ತಿಗಳಾದ ಮಹೇಶ್ವರ, ಮಹಾವಿಷ್ಣುಗಳನ್ನು ನಟರಾಜ, ರಂಗಧಾಮರನ್ನಾಗಿ ಕಂಡ ಭಾರತೀಯರಿಗೆ ನಾಟಕ ರಕ್ತಗತವಾಗಿತ್ತೆಂದೂ, ಅವರು ಗ್ರೀಕ್‌ರಿಂದ ತೆಗೆದುಕೊಳ್ಳಬೇಕಾದ ಕಾರಣವಿರಲಿಲ್ಲವೆಂದೂ ಊಹಿಸಲು ಸಾಧ್ಯವಿದೆ.

ಮಹಾರಾಜರು, ಮಹಾಕವಿಗಳು, ಮಹಾಜನರು ಎಲ್ಲರೂ ನಾಟಕದ ಬಗ್ಗೆ ಮೊದಲಿನಿಂದಲೂ ಅಪೂರ್ವ ಗೌರವ ಉತ್ಸಾಹಗಳನ್ನು ತೋರಿಸುತ್ತಾ ಬಂದಿದ್ದಾರೆ. ದ್ವಿಜಮುಖ್ಯನಾದ ಶೂದ್ರಕನ ಲಕ್ಷ್ಯವೂ ನಾಟಕದತ್ತ ಹೋಯಿತು. ಕ್ಷಾತ್ರಕುಲ ಶಿಖಾಮಣಿ ಶ್ರೀಹರ್ಷನ ಲಕ್ಷ್ಯವೂ ನಾಟಕದತ್ತ ಹೋಯಿತು. ಕ್ರಾಂತಿಕವಿಯಾದ ಭಾಸನಂತೂ ಸಂಸ್ಕೃತ ಸಾಹಿತ್ಯದ ಮುಖವನ್ನೇ ನಾಟಕದ ಕಡೆ ತಿರುಗಿಸಿಬಿಟ್ಟ.

ನಾಟಕದ ಬಗ್ಗೆ ಕನ್ನಡಿಗರ ಅಭಿಮಾನವೂ ಅಷ್ಟೇ ಗುರುತರವಾದುದು. ನಾಟಕಗಳನ್ನು ಬರೆಯಲಿ ಬಿಡಲಿ ನೃಪತುಂಗನಿಂದ ಸಿಂಗಾರಾರ್ಯನವರೆಗೆ ಎಲ್ಲ ಕನ್ನಡ ಕವಿಗಳು ಕೂಡ ನಾಟಕಕ್ಕೆ ತಮ್ಮ ಭಕ್ತಿ ಕುಸುಮಾಂಜಲಿಯನ್ನು ಅರ್ಪಿಸದೇ ಬಿಟ್ಟಿಲ್ಲ. ಆಧುನಿಕ ನಾಟಕದ ಬೆಳವಣಿಗೆಯನ್ನು ಅನುಲಕ್ಷಿಸುವುದಕ್ಕೆ ಮೊದಲು ಪ್ರಾಚೀನ ಕನ್ನಡ ಸಾಹಿತ್ಯದ ಬೆಳವಣಿಗೆಯನ್ನು ನೋಡಬೇಕು. ಕನ್ನಡ ಜನರ ಅಭಿರುಚಿ, ಸಾಹಿತ್ಯದೃಷ್ಟಿ, ಕಲಾಭಿಮಾನದ ಕೈಗನ್ನಡಿ ನಾಟಕವಾಗಿತ್ತೇ ಇಲ್ಲವೇ ಎಂದು ವಿವೇಚಿಸಲು ಈ ಬಗೆಯ ಸಿಂಹಾವಲೋಕನ ಇಂಬುಗೊಡುತ್ತದೆ.

ಕನ್ನಡ ಸಾಹಿತ್ಯದ ಪ್ರಾಚೀನತೆ ಕ್ರಿ.ಶ. ೪೫೦ರ ಹಲ್ಮಿಡಿಯ ಶಾಸನದವರೆಗೆ ಹೋಗಿದೆಯೆಂದು ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಅದಕ್ಕೂ ಬಹಳ ಹಿಂದೆ ಸಾವಿರಾರು ವರ್ಷಗಳ ಹಿಂದೆ ಉಜ್ವಲವಾಗಿ ವಿರಾಜಿಸಿದ್ದ ಮಹೆಂಜೋದಾರೋ ಸಂಸ್ಕೃತಿಯ ಕಾಲದ ನಾಣ್ಯಗಳ ಮೇಲಿನ ಭಾಷೆ ಕನ್ನಡವೆಂದು ರೆ.ಫಾಧರ್ ಹೆರಾಸ್‌ರವರು ಅಭಿಪ್ರಾಯಪಟ್ಟಿದ್ದಾರೆ. ಫಾದರ್ ಹೆರಾಸ್ ರವರ ವಾದ ಸರ್ವಗ್ರಾಹ್ಯವಾದರೆ ಕನ್ನಡ ಭಾಷೆ, ಸಾಹಿತ್ಯಗಳ ಚರಿತ್ರೆಯನ್ನು ಕ್ರಿ.ಪೂ. ೫೦೦೦ ವರ್ಷಕ್ಕೆ ಒಯ್ಯಬೇಕಾಗುತ್ತದೆ.

ನಮಗೆ ಸಿಕ್ಕಿರುವ ಮೊದಲನೆಯ ಕನ್ನಡ ಶಾಸನ ಕ್ರಿ.ಶ. ೪೫೦ರ ಹಲ್ಮಿಡಿಯ ಶಾಸನ. ಇದರ ಶೈಲಿಯು ಪ್ರಾಚೀನ ಕನ್ನಡ ಭಾಷೆಯ ಬೆಳವಣಿಗೆಯನ್ನು ಸೂಚಿಸುತ್ತದೆ. ಉಪಲಬ್ದವಾಗಿರುವ ಕನ್ನಡದ ಮೊಟ್ಟ ಮೊದಲನೆಯ ಗ್ರಂಥ 'ಕವಿರಾಜಮಾರ್ಗ'ದ [೮೧೫–೯೭೮] ಶೈಲಿಗೆ ಪೂರ್ವದಲ್ಲಿದ್ದ ಒಂದು ಸುಪುಷ್ಟ ಶೈಲಿಯನ್ನು ಈ ಶಾಸನ ನಿರ್ದೇಶಿಸುತ್ತದೆ. ಹಲ್ಮಿಡಿ ಶಾಸನ, ಕವಿರಾಜಮಾರ್ಗಗಳ ಮಧ್ಯಕಾಲದ ಚಿಕ್ಕಮಂಗಳೂರು, ಶ್ರವಣಬೆಳಗೊಳ, ಕಡೂರು ಶಾಸನಗಳೂ ಇಂಥ ಪ್ರಾಚೀನ ಶೈಲಿಯನ್ನೇ ಅನುಸರಿಸಿದೆ.

ಶ್ರೀವಿಜಯ ತನ್ನ ಕವಿರಾಜಮಾರ್ಗದಲ್ಲಿ ವಿಮಲಾ, ಉದಯ, ನಾಗಾರ್ಜುನ, ಜಯಬಂಧು, ದುರ್ವಿನೀತ ಮೊದಲಾದ ಕವಿಗಳನ್ನು ಹೆಸರಿಸುತ್ತಾನೆ. ದುರ್ವಿನೀತನ ಬಹುಮುಖ ಪಾಂಡಿತ್ಯವನ್ನು ವರ್ಣಿಸುವ ನಲ್ಲಾಲ ತಾಮ್ರಶಾಸನ 'ಅನೇಕ ಕಾವ್ಯ ಕಥಾನಾಟಕ ಪ್ರಣಯನ ಪ್ರರೂಢ ಪಾಟವೇನ. . . . ಅರಿ ನರಪತಿ ಶ್ರೀ ದುರ್ವಿನೀತ ನಾಮಧೇಯೇನ' ಎಂದು ಹೇಳುತ್ತದೆ. ಶ್ರೀವಿಜಯನ ಪೂರ್ವದಲ್ಲಿದ್ದ ದುರ್ವಿನೀತನು ನಾಟಕಕಾರನೂ ಆಗಿದ್ದಿರಬಹುದೆಂದು ಈ ಶಾಸನದ ಆಧಾರದ ಮೇಲೆ ಹೇಳಬಹುದು.

ಶ್ರೀವಿಜಯ ತನ್ನ ಕವಿರಾಜಮಾರ್ಗದಲ್ಲಿ ಉಪಯೋಗಿಸುವ 'ಪಗರಣ' ಶಬ್ದವು ಸಂಸ್ಕೃತ 'ಪ್ರಕರಣ' ಶಬ್ದದ ತದ್ಭವವೆಂದೂ ಅವನು ಸಂಸ್ಕೃತದ ರೂಪಕಗಳಲ್ಲಿ ಒಂದಾದ ಪ್ರಕರಣವನ್ನೇ ಕುರಿತು ಆ ಶಬ್ದವನ್ನು ಉಪಯೋಗಿಸಿದ್ದಾನೆಂದೂ ವಿಮರ್ಶಕರ ಅಭಿಪ್ರಾಯ.
ಇತರ ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ನಾಟಕಕ್ಕಿರುವ ಅನ್ವಯವನ್ನು ಈ ಕೆಳಗಿನಂತೆ ಕ್ರೋಢೀಕರಿಸಬಹುದು.

**ಆದಿಪಂಪ (೯೪೧)** : ಆದಿಪುರಾಣದ ೭ನೆಯ ಆಶ್ವಾಸದಲ್ಲಿ . . . . "ತಾನುಮಾನಂದ ನಾಟಕೆ ಮಾಡಲ್ಬಗೆದು ಕೃತಾನುಕರಣಮೆ ನಾಟಕಮಪ್ಪುದರಿಂ ಭಗವಜ್ಜನ್ಮಾಭಿಷೇಕ ಸಂಬಂಧಿಯಾಗೆ ತನ್ನ ಪೊಸತೆ ಸಮೆದ ಸಮವತಾರ ರೂಪಮುಮಂ ದಶಾವತಾರ ರೂಪಗರ್ಭ ಸಂದರ್ಭಗಳಪ್ಪ ಶೇಷಾಶೇಷ ರೂಪಕಂಗಳುಮಂ ಸುರಾಸರಸಭೆಗಂ ನಾಭಿರಾಜಾಧಿ ಮನುಜ ಸಭೆಗಂ ಮೆರೆಯಲೆಂದು ಶುದ್ಧ ವಿಚಿತ್ರವೆಂಬ ಪೂರ್ವರಂಗ ಪ್ರಸಂಗದೊಳ್ ಜರ್ಜರ ಪೂಜಾ ಮಂಗಳ ಪದೋಚ್ಚಾರಣ ಪುಷ್ಪಾಂಜಲಿ ವಿಕ್ಷೇಪಣಾದಿ ನಾಂದೀವಿಧಿಯಂ ನಿರ್ವರ್ತಿಸಿ ದೃಶ್ಯ ಶ್ರವ್ಯ ದೃಢಮಾತ್ರಾದಿ ಪ್ರಯೋಗಂಗಳೊಳಂ ನಾನಾವಿಧ ವಾಧ್ಯಂಗಳೊಳಂ ಆಂಗಿಕಾಭಿನಯಗಳೊಳಮೆಸಯೆ ಮಘವನಘವಿಘಾತಾರ್ಥ ಮುದ್ಧತಾಭಿನಯ ಪ್ರಾಯಮಯೂರಭಟೀವೃತ್ತಿಯುಕ್ತಮಪ್ಪ ತಾಂಡವಮನಾಡಲುದ್ಯೋಗಂಗೆಯ್ದು ಮಂಗಳಾಳಂಕಾರಾಲಂಕೃತನಾಗಿ ನಾಟ್ಯ ವಿದಾಚಾರ್ಯನಂ ಪೋಲ್ತು ರಂಗಬೊಕ್ಕು" ಎಂದು ನಾಟಕವನ್ನು ಕುರಿತು ಹೀಗೆ ಉಲ್ಲೇಖಿಸಿದ್ದಾನೆ.
**ರನ್ನ (೧೦೦೭)**: ಗದಾಯುದ್ಧದಂಥಾ ವೀರಕಾವ್ಯದಲ್ಲಿ ನಾಟಕೀಯ ಅಂಶಗಳನ್ನು ಆಶ್ವಾಸ ೧, ೨ರಲ್ಲಿ ಪ್ರಸ್ತಾಪಿಸಿದ್ದಾನೆ. ಬಿ.ಎಂ.ಶ್ರೀಯವರು ಈ ಅಂಶಗಳನ್ನಾಧರಿಸಿಯೇ 'ಗದಾಯುದ್ಧ ನಾಟಕಂ'ನ್ನು ರಚಿಸಿದರು.

**ಕುಮಾರವ್ಯಾಸ (೧೨೩೦)** ಈತನ ಕನ್ನಡ ಭಾರತ ಅಥವಾ ಗದುಗಿನ ಭಾರತ

ಆದಿಪರ್ವದಲ್ಲಿ (ಸಂಧಿ ೭)
. . . . . . ಅಂಧ ಭೂಪನ
ಕೊರಳು ಕುಸಿದುದು ನುಡಿಯ ನಾಟಕ ಹರ್ಷಭಾರದಲಿ (೪೫)

**ಗದಾಪರ್ವದಲ್ಲಿ** (ಸಂಧಿ ೨)
ಇಕ್ಕಡಿಯ ಬಸುರುಚ್ಚಿಗಳೆವರ
ಸುಕ್ಕುಗಳ ನಾಟಕದವೊಲುಕೆ
ಯ್ಯಿಕ್ಕಿದಾನೆಯ ಹಿಂಡು ಹರಿದುದು ನಿಮಿಷಮಾತ್ರದಲಿ (೨೪)

**ಉದ್ಯೋಗಪರ್ವದಲ್ಲಿ** (ಸಂಧಿ ೩)
ಮುಕುತಿವಿದರುಗಳಾಗಿ ವಿದ್ಯಾ
ಧಿಕರೆನಿಸಿ ಸಮಬುದ್ಧಿಗಳ ನಾ
ಟಕದ ನಟಿಸುತ ಪರಮ ತತ್ತ್ವಜ್ಞಾನಪರರಾಗಿ (೮೫)

**ಕರ್ಣಪರ್ವದಲ್ಲಿ** (ಸಂಧಿ ೧೯)
ಕೆಯ್ಗುಡಿಯ ಪಟುಭಟರೊಳಗೆ ಬಲು
ಗೆಯ್ಗಳೆಂದಸುರಾರಿ ಹೊಗಳಲು
ಹೊಯ್ಗಳಿಪ ಹೊಸ ನಾಟಕವನಭಿನಯಿಸಿ ಹೆಣಗಿದರು (೪೫)

ಕರ್ಣಪರ್ವದಲ್ಲಿ (ಸಂಧಿ ೨೮)
ನೋಡಲೀ ವ್ಯಥೆಯಂಟೆ ಭುವನದ
ಗೂಡು ಕೃಷ್ಣನ ದೇಹವಿದು **ನಾ**
ಡಾಡಿಗಳ ನಾಟಕವಲೇ ನರನಾಥ ಕೇಳೆಂದ (೩)

**ಅರಣ್ಯಕಪರ್ವದಲ್ಲಿ** (ಸಂಧಿ ೧೩)
ಖೇಡನಾದನ ಜಾತಂರಿಪು ಮಾ
ತಾಡಿಸಿದಹಿಪತಿಯ ನೆಲೆ ನಾ
ಡಾಡಿಗಳ ನಾಟಕದ ಫಣಿಯಲ್ಲಾರು ನೀನೆಂದ (೪೧)

ಇಷ್ಟು ಉದಾಹರಣೆಗಳಿಂದ ಕುಮಾರವ್ಯಾಸನ ಕಾಲದಲ್ಲಿ ನಾಟಕಗಳು, ಅವು ಸಾಹಿತ್ಯಕ್ಕೆ ಉಚಿತವಾಗಿರಲಿ, ಅನುಚಿತವಾಗಿರಲಿ, ಈ ಪ್ರಶ್ನೆ ತತ್ಕಾಲದ ಮಟ್ಟಿಗೆ ಅಪ್ರಸ್ತುತ, ಹೇಗೋ ನಾಟಕಗಳು ಸಾಕಷ್ಟು ಇದ್ದಿರಬೇಕು, ಅವನ್ನು ಆಗಾಗ್ಗೆ ನಟಿಸುತ್ತಲೂ ಅಭಿನಯಿಸುತ್ತಲೂ ಇದ್ದುದನ್ನು ಈತನು ಕಣ್ಣಾರೆ ಕಂಡಿರಬೇಕು. ಅವು ಆತನ ಮನಸ್ಸಿನಲ್ಲಿ ನಾಟಕವೆಂದೂ, ಅಂತೆಯೆ ಇನ್ನೆಷ್ಟೋ ಪ್ರೇಕ್ಷಕರ ಸೆಳಕೊಂಡಿರುವುದರಿಂದ, ಅವು ಲೋಕಪ್ರಿಯವೂ ಆಗಿರಬೇಕು. ಆ ಕಾರಣವೇ ಅವೆಲ್ಲವೂ ತೀರಾ ಕನ್ನಡ ನಾಟಕಗಳೇ. 'ನಾಡಾಡಿಗಳ ನಾಟಕ'ವಂತೂ ಕನ್ನಡವೇ ಆಗಿರಬೇಕೆಂದು ಬೇಕಾದಷ್ಟು ಆಧಾರಗಳು (ಹೇಳಿಕೆಗಳು) ವ್ಯಕ್ತವಾಗುತ್ತವೆ. ಹಾಗಿಲ್ಲದಿದ್ದರೆ ನಾಟಕವನ್ನು ಕುರಿತ ರೂಪಕೋಕ್ತಿಯ ಇಷ್ಟು ಉದಾಹರಣೆಗಳು ಆತನ ಕಾವ್ಯದಲ್ಲಿ ಸರ್ವಥಾ ಇರುತ್ತಿರಲಿಲ್ಲ.

**ಕನ್ನಡ ಭಾರತದ ಶಲ್ಯಪರ್ವದಲ್ಲಿಯ** (ಸಂಧಿ ೧)
ಉಚಿತವಿತರರೇತರ ಪದಸ್ತುತಿ
ರಚನೆ ಗುಣಯುಕ್ತರಿಗೆ ವಿಜಯೋ
ಪಚಿತ ರಣ **ನಾಟಕಕೆ** ಜವನಿಯಕೆಯಾಯ್ತಲೇ ರಜನಿ (೨೧)

ಎಂಬಲ್ಲಿ ಕುಮಾರವ್ಯಾಸನ ಕಾಲದಲ್ಲಿ ಆಡುತ್ತಿದ್ದ ನಾಟಕಗಳಲ್ಲಿ ಜವನಿಕೆಗಳು, ಅಂದರೆ ತೆರೆಗಳು ಉಪಯೋಗಿಸಲ್ಪಡುತ್ತಿದ್ದವೆಂದೂ, ಅದರದೇ ವಿರಾಟ ಪರ್ವದಲ್ಲಿಯ (ಸಂಧಿ ೧೧)

ಮೇಳವೇ ಫಡ ಮನದ ಮತ್ಸರ
ಕಾಲಿಡಲು ತೆರಹಿಲ್ಲ ಮನುಜರ
ಹೋಲುವೆಯ **ನಾಟಕದ** ನಿರ್ಜರ ಮಂಡಲೇಶ್ವರರು (೧೧)

ಎಂಬಲ್ಲಿ ಆ ನಾಟಕಗಳಲ್ಲಿ ದೇವತೆಗಳ ಪಾತ್ರಗಳನ್ನು ಮನುಷ್ಯರ ಹೋಲುವೆಯಲ್ಲಿ ರಚಿಸುತ್ತಿದ್ದರೆಂದು ತಿಳಿಯುತ್ತದೆ. ಅರಣ್ಯಕ ಪರ್ವದಿಂದ [ಫಿಖಖಖ ೪೧] ಮೇಲೆ ಕಂಡಿರುವ ನಾಡಾಡಿಗಳ ನಾಟಕದ ಫಣಿ ಎಂಬಲ್ಲಿ ಪ್ರಸ್ತುತ ನಾಟಕ ಲೋಹಿತಾಶ್ವನಿಗೆ ಹಾವು ಕಡಿದಂತೆ ಕಾಣಿಸುವ ಹರಿಶ್ಚಂದ್ರ ನಾಟಕವಾಗಿರಬಹುದೇ ಎನಿಸುತ್ತದೆ.

**ಕೇಶಿರಾಜ (೧೨೬೦)**: ಇವನ ಸುಭದ್ರಾಹರಣ, ಪ್ರಬೋಧ ಚಂದ್ರೋದಯಗಳು ನಾಟಕವಾಗಿರಬೇಕೆಂದು ಊಹೆ.

**ನಿಜಗುಣಶಿವಯೋಗಿ (೧೫೦೦)**: ಇವನ 'ವಿವೇಕಚಿಂತಾಮಣಿ'ಯ

ಳನೇಯ ಪ್ರಕರಣದಲ್ಲಿ "ನಾಟಕದಲ್ಲಿ ದಿನದಿನಕಭಿನಯಿಸಲ್ತಕ್ಕ ರಸಭಾವ ಸಂವಿಧಾನ ಆಶ್ರಯಂಗಳೆಂಬ ಚತುರ್ವಿಧ ಪ್ರಬಂಧಾಂಶಗಳಂ ಮುಖದೃಷ್ಟಿ ಹಸ್ತಪಾದಂಗಳಭಿನಯಿಪ ಲಕ್ಷಣಂ ತಪ್ಪಡಿ ಮೇಲೆ ಮುಖ ರಸವೇ ಹಾವ, ನೇತ್ರ ಸ್ಪಂದವೇ ಭಾವ, ಪದನಾಸ್ಯವೇವಿಲಾಸ, ಭ್ರೂವಿಕ್ಷೇಪಣವೇ ವಿಭ್ರಮವೆಂಬ ಚತುರ್ವಿಧಮೋಹವಂ ಮೇಯ್ವೆತ್ತು, ಶುದ್ಧ ದೇಶಿಯವೆಂಬ ದ್ವಯಮಾವಿವರಗೊಂಡು, ತಾಂಡವ ನಾಟ್ಯ ನೃತ್ತ್ಯಲಾಸ್ಯ ಗುಂಡಿಲ ಪೆಕ್ಕಣ ಲಚ್ಚಣ ಅಪರಿಪಾತ್ರ ಸುಪಾತ್ರ ಸರ್ವತೋಭದ್ರವೆಂಬ ದಶವಿಧಪಾತ್ರಂಗಳಂ ಬೀರಿ ಲಯ ಗಾನಾಭಿನಯ ರಸಾಲಂಕಾರ ಭಾವ ಸಾಮರಸ್ಯವಂ ತೋರಿ, ಶ್ರುತಿ ನಯನ ಹೃದಯಕರ್ಷಣವಂ ಗೆಯ್ವ ನರ್ತಕ ನರ್ತಕಿಯರಿಂದ ಪಾಸಿತರಾಗಿ . . . ." ಎಂಬಲ್ಲಿಂದ ಆ ಕಾಲದಲ್ಲಿ ನಾಟಕಗಳಿದ್ದುವೆಂದು ತಿಳಿಯುತ್ತದೆ.

**ಕೃಷ್ಣದೇವರಾಯ (೧೫೦೯-೧೫೨೯):** ಇವನ ಕಾಲದಲ್ಲಿ ನಾಟಕಕ್ಕೆ ವಿಶೇಷ ಪ್ರೋತ್ಸಾಹವಿತ್ತು. ವಸಂತೋತ್ಸವ ಸಮಯದಲ್ಲಿ ಸಮಸ್ತ ಪ್ರಜೆಗಳ ಮುಂದೆ ರಾಜನೇ ಬರೆದ 'ಜಾಂಬವತಿಕಲ್ಯಾಣ' ನಾಟಕವನ್ನು ಅಭಿನಯಿಸುತ್ತಿದ್ದರು. ಈ ಕಾಲದಲ್ಲಿ ಆಡಲ್ಪಟ್ಟ ನಾಟಕಗಳಿಂದ ರಂಗಭೂಮಿಯಲ್ಲಿ ಒಂದು ಹೊಸ ಕಳೆ ಬಂದಿತು.

**ರತ್ನಾಕರವರ್ಣಿ (೧೫೫೭):** 'ಭರತೇಶ ವೈಭವ'ದ ಪೂರ್ವ ನಾಟಕ, ಉತ್ತರ ನಾಟಕ ಸಂಧಿಗಳಲ್ಲಿ ನಾಟ್ಯ, ನಾಟ್ಯಶಾಲೆಗಳ ವಿಸ್ತೃತ ವರ್ಣನೆಯನ್ನು ಕವಿ ಕೊಟ್ಟಿದ್ದಾನೆ. ಇವು ನಾಟ್ಯಕ್ಕೆ ಅನ್ವಯಿಸುವುದಾದರೂ ನಾಟಕರಂಗವೂ ಹೆಚ್ಚು ಕಡಿಮೆ ಅದೇ ರೀತಿಯಾಗಿದ್ದಿರಬೇಕು ಎಂದು ಊಹಿಸಲು ಅಡ್ಡಿಯಿಲ್ಲ.

**ಲಿಂಗಣ್ಣಕವಿ (೧೭೫೦):** 'ಕೆಳದಿ ನೃಪ ವಿಜಯ'ದಲ್ಲಿ (ಗಿ. ೩೦) ಕೆಳದಿಯ ಅರಸನಾದ ಹಿರಿಯ ವೆಂಕಟಪ್ಪನಾಯಕನು (ಕ್ರಿ.ಶ. ೧೫೮೨-೧೬೨೯) 'ಇಕ್ಕೇರಿಯರಮನೆಯೊಳ್ವಿಚಿತ್ರತರ ರಚನಾ ಕೌಶಲ್ಯದಿಂದ ನಾಟಕ ಶಾಲೆಯಂ ನಿರ್ಮಾಣಗೆಯ್ದಿದನೆಂದಿದೆ.

**ಭಟ್ಟಾಕಳಂಕನು (೧೬೦೪):** ತನ್ನ ಕಾಲದಲ್ಲಿ ನಾಟಕಗಳು ಇದ್ದುವೆಂದು ಹೇಳುತ್ತಾನೆ. ಇವನ ಶಬ್ದಾನುಶಾಸನದಲ್ಲಿ "ಶಬ್ದಾಗಮಯುಕ್ತ್ಯಾಗಮ ಪರಮಾಗಮ ವಿಷಯಾಣಾನಾಂ ಚ ಬಹುನಾಂ ಗ್ರಂಥಾನಾಮಪಿ ಭಾಷಾಕೃತಾನಿಂಮುಪಲಭ್ಯಮಾನತ್ವಾತ್" ಎಂದಲ್ಲಿರುವಲ್ಲಿಂದ ಆತನ ಕಾಲದಲ್ಲಿ ಕನ್ನಡ ನಾಟಕಗಳು ಇದ್ದುವೆಂದು ತಿಳಿಯುತ್ತದೆ.

**ಗೋವಿಂದ ವೈದ್ಯನು (೧೬೪೪):** 'ಕಂಠೀರವನರಸರಾಜವಿಜಯ'ದಲ್ಲಿ ನಾಟ್ಯಶಾಲೆಯನ್ನು ಬಹು ಮನೋಹರವಾಗಿ ವರ್ಣಿಸಿದ್ದಾನೆ. ಕಂಠೀರವನರಸರಾಜನು ಪರಿವಾರದೊಡನೆ ನಾಟ್ಯಶಾಲೆಯನ್ನು ಪ್ರವೇಶಿಸಿ ಆಸನದ ಮೇಲೆ ಕುಳಿತ ಬಳಿಕ "ತೂರ್ಯತ್ರಯದ ಮಂಗಳ ಘೋಷವು ಕವಿಗಳನ್ನು ಆಕರ್ಷಿಸುತ್ತಿರುವಾಗಲೇ, ಭಾಸುರ ಬಿರುದಿನ ನಾಟ್ಯವಧುಗಳು ಸಂತೋಷದೆ ನಡೆತಂದರು; ಇವರು ತೊಳಗುವ ರತ್ನಗಾಸೆಯಿಂದ ಪರಿಶೋಭಿಸುತ್ತಿದ್ದರು; ಸರ್ವಾಂಗಕ್ಕೆ ಮಣಿಭೂಷಣ ಅಳವಟ್ಟವರು. ಥಳಥಳಿಸುವ ಮುದ್ದು ಮೊಗದ ಚೆನ್ನೆಯರು ಇವರಿಗೆ ನಾಟ್ಯಾಭಿನಯಗಳನ್ನು ಕಲಿಸಿದ ಭರತಾಚಾರ್ಯನೂ, ನಾಟ್ಯವಧುಗಳ ಗುಂಪಿನಲ್ಲಿದ್ದನು. ಆತನ ಉಡಿಯ ಸುತ್ತಿದವಲ್ಲಿ ಪಾಟನ, ಕರದಲಿಪಿಡಿದು ರಂಜಿಪ ರನ್ನಸೆಳೆಯ ಬೆಡಗನ್ನು ಬಣ್ಣಿಸಲಿಕ್ಕಾಗದಂತದು. ನಾಟ್ಯವಧುಗಳೆಲ್ಲ ಕಾಂಡಪಟದ ಮರೆಯೊಳು (ಪರದೆ ಹಿಂದೆ) ಭರತಶಾಸ್ತ್ರಾಧಿದೇವತೆಯರಂತೆ ರಂಜಿಸತೊಡಗಿದರು. ಆಗ ತಾಳ, ಮದ್ದಳೆ, ಮುಖವೀಣೆ, ಆವುಜ, ಗೀತಾದಳಪ, ನಾಟ್ಯವಧುಗಳ ಕಾಲಗೆಜ್ಜೆಯರವ, ರತಿ ಇವೆಲ್ಲ ಕೂಡಿ ಕಿವಿಗೊಂದು ಹೊಸ ಸವಿಯನ್ನು ಬೀರತೊಡಗಿದವು. ಮೊದಲು ಸೂತ್ರಧಾರನು ಬಂದು ತತ್ತಾಕಾರವ ವಿರಚಿಸಿ ಜವನಿಕೆದೆಯೆ ಭರತಶಾಸ್ತ್ರಾಗಮದಂತೆ, ಪ್ರೌಢೆಯರು ಪುಷ್ಪಗಳನ್ನು ಸೂಸಿದರು. ಬಳಿಕ ಮಂಗಳಾಚರಣಕ್ಕೆ ಮೊದಲಾಯಿತು. ಇನಿದಾದ ದನಿಯಲ್ಲಿ

> 'ನರಸಿಂಹಸ್ತುತಿ ಗೀತ ಪ್ರಬಂಧವ ।
> ಪಿರಿದು ಸುಳಾದಿ ತಾಳದಲಿ ।
> ಕರದಭಿನಯಗೂಡಿ ಕಡುಕುಶಲದೆ ನಾಟ್ಯ ।
> ದಿರೆವ ಮೆರೆದಂಗನೆಯರು ॥'

ಅಲ್ಲದೆ ಅವರು ಕರಭೇದ, ದೃಷ್ಟಿಭೇದ, ಶಿರಭೇದ, ಸ್ಥಾನಕಭೇದ, ಚಾರಿಯಭೇದ, ಇವೆಲ್ಲವುಗಳ ಮೂಲಕ ಭಾವವನ್ನು ಪ್ರದರ್ಶಿಸಿದರು. ಆ ನರ್ತಕಿಯರಿಗೆ ನಾಟ್ಯಭೇದಗಳಾದ ಅಂಗ, ಪ್ರತ್ಯಂಗೋಪಾಂಗ, ಬಹುಚಾಳಿ, ವರದೇಶಿ, ಕೋಲಚಾರಿ, ಅಂಗಹಾರ, ಮಂಡಲ, ಕರಕ್ಷೇತ್ರ ಎಂಬುವೆಲ್ಲ ಚೆನ್ನಾಗಿ ಗೊತ್ತಿದ್ದವು. 'ರಂಭಾನಾರಿಯ ಪಾತ್ರದ ಪರಿಣತಿಯ . . . . ಊರ್ವಶಿಯ ಮುಂಬರಿದೆಸೆವಕಟ್ಟಣಿಗೆಳಗತಿಯ' ಅವರು ಆಡಿ ತೋರಿಸಿದರು. ಅಂತೆಯೆ 'ಪಿರಿದು ಪ್ರಬಂಧ - ಜಕ್ಕಣಿ ರಾಜಕೀರನ ಮೆರೆವ ಕಟ್ಟಳೆಯಾಟಗಳ' ಪ್ರದರ್ಶನ ಮಾಡಿದರು. ಆಗ ಅವರ ಪಾತ್ರಕ್ಕೆ ಮೆಚ್ಚಿ ಪಾರ್ವತಿ, ಶಾರದೆ ಹೂಮಳೆಗರೆದರೋ ಎಂಬಂತೆ ಪರಿಮಳ ಪುಷ್ಪಗಳು ಸೂಸಿದವು. ನಾಟ್ಯವನ್ನು ನೋಡಿ ನಲಿದ ನರಸರಾಜನು 'ಸುರಚಿರವಸನ' ಕರ್ಪೂರದ ಪರಿಮಳ ಮೆರೆವ ವೀಳೆಯನಿತ್ತು ಮನ್ನಿಸಿದ" ಈ ವರ್ಣನೆಯಿಂದ ನಾಟ್ಯಕಲೆಯಲ್ಲದೆ ನಾಟಕ ಕಲೆಯು ಒಂದು ಉನ್ನತಸ್ಥಿತಿಗೆ ಬಂದು ಮುಟ್ಟಿದುದು ತಿಳಿದುಬರುತ್ತದೆ.

**ಸಿಂಗರಾರ್ಯನ (೧೬೮೦)** 'ಮಿತ್ರಾವಿಂದ ಗೋವಿಂದ' ಕನ್ನಡದಲ್ಲಿ ಉಪಲಬ್ದವಿರುವ ಮೊದಲನೆಯ ನಾಟಕ. ಚಿಕ್ಕದೇವರಾಯನ ಆಸ್ಥಾನ ಪಂಡಿತನಾಗಿದ್ದ ಸಿಂಗರಾರ್ಯ ಶ್ರೀಹರ್ಷನ 'ರತ್ನಾವಳಿ' ನಾಟಕದ ಆಧಾರದ ಮೇಲೆ 'ಮಿತ್ರಾವಿಂದಾ ಗೋವಿಂದ' ರಚಿಸಿದ್ದಾನೆ.

ಪ್ರಾಚೀನ ಕನ್ನಡ ಸಾಹಿತ್ಯದ ನಾಟಕ ಇತಿಹಾಸ ಹೇಳಿಕೊಳ್ಳುವಷ್ಟು ತೃಪ್ತಿಕರವಾಗಿಲ್ಲ. ಕಾವ್ಯ, ನಾಟಕ ಪರಿಣತಿಗಳಾದ ಕನ್ನಡಿಗರು ನಾಟಕ ಸಾಹಿತ್ಯವನ್ನೇಕೆ ಬೆಳೆಸಲಿಲ್ಲವೆಂಬುದು ವಿಚಾರಾರ್ಹವಾದ ಸಮಸ್ಯೆ. ರತ್ನಾಕರವರ್ಣಿಯ ನಾಟ್ಯಶಾಲೆಯ ವರ್ಣನೆ ಹಾಗೂ ಹೊಯ್ಸಳರ ವಿಷ್ಣುವರ್ಧನನ ಸಹಧರ್ಮಿಣಿ ಶಾಂತಳಾದೇವಿಯ ನಾಟ್ಯಪ್ರಿಯತೆ ಕನ್ನಡಿಗರ ಕಲಾಭಿಮಾನದ ಹೆಗ್ಗುರುತುಗಳಾಗಿವೆ. ಜನತೆಯಲ್ಲಿ ನಾಟಕ ಹಲವು ಪ್ರಕಾರಗಳಲ್ಲಿ ಬೆಳೆಯಿತು. ಸೂತ್ರದಗೊಂಬೆ, ಬಯಲಾಟ, ಯಕ್ಷಗಾನ, ನೆಳಲಾಟಗಳಿಗೆ ಅವಶ್ಯಕವಾದ ಸಾಹಿತ್ಯವನ್ನು 'ಭಾಗವತರು' ರಚಿಸಿದರು. ಆದರೆ ಅವುಗಳಿಗೆ ಪಂಡಿತರ ಒಪ್ಪಿಗೆಯ ಮುದ್ರೆ ಬಿದ್ದ ಹಾಗೆ ಕಾಣುವುದಿಲ್ಲ. ರಾಮಾಶ್ವಮೇಧ ಕರ್ತೃವಾದ ಮುದ್ದಣ ಬರೆದ ಯಕ್ಷಗಾನಗಳು ಕೂಡ ಪಂಡಿತರ ಮನ್ನಣೆಯನ್ನು ದೊರೆಕಿಸಿಕೊಳ್ಳಲಿಲ್ಲ. ನಾಟಕ ಕನ್ನಡ ನಾಡಿನಲ್ಲಿ ಕೇವಲ ಸಾಮಾನ್ಯವರ್ಗದ ಸೊತ್ತೆಂಬ ಭಾವನೆ ವಿದ್ವಜ್ಜನರಲ್ಲಿ ಮೂಡಿದ್ದಿರಬಹುದೇ ಎಂಬ ಅನುಮಾನಕ್ಕೆ ಅವಕಾಶವಿದೆ.

ಮಾಳವಿಮಾಧವ, ಪ್ರಬೋಧಚಂದ್ರ, ಸುಭದ್ರಾಹರಣ ಮೊದಲಾದ ನಾಟಕಗಳಿದ್ದವೆಂದು ತಿಳಿದು ಬಂದಿರುವುದು. ಕನ್ನಡದಲ್ಲಿ

ನಾಟಕಗಳು ಇದ್ದಿರಬೇಕು – ಆದರೆ ಅವು ಉಪಲಬ್ದವಿಲ್ಲವೆಂಬುದು ವಿಷಾದದ ಸಂಗತಿ. ಆದರೆ ಚಂಪುವಿನ ಇಂಪಿಗೆ ಮನಸೋತ ಕನ್ನಡಿಗರು ತಮ್ಮ ಭಾವ ಪ್ರಕಾಶನಕ್ಕೆ ಅದರಲ್ಲಿನ ಅವಕಾಶವನ್ನು ಕಂಡು ನಾಟಕವನ್ನು ಉಪೇಕ್ಷೆ ಮಾಡಿರಬಹುದು. ಕೆಲವು ಚಂಪೂ ಕಾವ್ಯಗಳು, ಮುಂದೆ ಬೆಳೆದ ಷಟ್ಪದಿ ಕಾವ್ಯಗಳು ನಾಟಕಗಳೇ ಆಗಿವೆ. ಅವುಗಳ ಗರ್ಭದಲ್ಲಿನಾಟಕ ಹುದುಗಿ ಕುಳಿತಿರುವುದು ಮಾತ್ರವಲ್ಲದೆ ಅವುಗಳ ತಂತ್ರ ರಚನೆ ಕೂಡ ನಾಟಕ ರೂಪಕವಾಗಿಯೇ ಇದೆ. ಅಂಥ ಚಂಪೂ, ಷಟ್ಪದಿ ಕಾವ್ಯಗಳಲ್ಲಿ ಕೆಲವನ್ನು ನಾಟಕ ರೂಪಕಕ್ಕಿಳಿಸಿರುವ ಬಿ.ಎಂ.ಶ್ರೀ ಯವರು (ರನ್ನನ ಗದಾಯುದ್ಧ) ಅಜ್ಜಂಪುರದ ಶೇಷಗಿರಿರಾಯರು ಮತ್ತು ವಿ.ಬಿ. ನಾಯಕರು (ಕುಮಾರವ್ಯಾಸನ ಭಾರತ) ಈ ಅಂಶವನ್ನು ಸ್ಪಷ್ಟಗೊಳಿಸಿದ್ದಾರೆ. ಜನ್ನನ 'ಯಶೋಧರ ಚರಿತೆ', ರಾಘವಾಂಕನ 'ಹರಿಶ್ಚಂದ್ರ ಕಾವ್ಯ', ಚಾಮರಸನ 'ಪ್ರಭುಲಿಂಗಲೀಲೆ', ಹರಿಹರನ 'ಗಿರಿಜಾ ಕಲ್ಯಾಣ', ಮುದ್ದಣನ 'ರಾಮಾಶ್ವಮೇಧ' ಕಾವ್ಯಗಳನ್ನು ಉತ್ಕೃಷ್ಟ ನಾಟಕಗಳನ್ನಾಗಿ ಮಾರ್ಪಡಿಸಬಹುದು. ಅಂತೆಯೆ ಮಾರ್ಪಡಿಸಿದ್ದಾರೆ. [ಕಾರ್ನಾಡರು ಯಶೋಧರ ಚರಿತೆಯ ಸನ್ನಿವೇಶ ಕುರಿತು 'ಹಿಟ್ಟಿನ ಹುಂಜ' ನಾಟಕ ರಚಿಸಿದ್ದಾರೆ.] ರನ್ನ, ಜನ್ನ, ರಾಘವಾಂಕರು ಮೊದಲು ನಾಟಕಗಳನ್ನೇ ಬರೆದು ನಂತರ ಅವುಗಳನ್ನು ಪಂಡಿತರ ಪ್ರೀತಿಗಾಗಿ ಕಾವ್ಯಗಳನ್ನಾಗಿ ಮಾರ್ಪಡಿಸಿರಬಹುದೇ ಎಂಬ ಸಂದೇಹವೂ ಉತ್ಪನ್ನವಾಗುತ್ತದೆ.

೧೬೮೦ ರಿಂದ ೧೮೭೦ರ ವರೆಗೆ ಕನ್ನಡ ರಂಗಭೂಮಿಯ ಇತಿಹಾಸ ತಿಳಿದುಬಂದಿಲ್ಲ. ಈ ಕಾಲದಲ್ಲಿ ನಾಟಕ ಎಲ್ಲಿ ಹೇಗೆ ಬೆಳೆಯಿತೆಂಬುದು ಇನ್ನೂ ಅಂಧಕಾರದಲ್ಲಿದೆ. ೧೯ನೆಯ ಶತಮಾನದ ಕೊನೆಯ ಭಾಗವನ್ನು ನಾಟಕದ ಪುನರೋದಯದ ಕಾಲವೆಂದು ಹೇಳಬಹುದು.

ಗೊಂಬೆಯಾಟ, ಭಾಗವತರಾಟಗಳಲ್ಲಿ ಪಾತ್ರದ ಮಾತುಗಳನ್ನೆಲ್ಲಾ ಸೂತ್ರಧಾರನೇ ಹೇಳುತ್ತಿದ್ದುದನ್ನು ಕಂಡು ಚುರಮುರಿ ಶೇಷಗಿರಿರಾಯರು ೧೮೬೯ ರಲ್ಲಿ ಆಯಾ ಪಾತ್ರಗಳ ಮಾತುಗಳನ್ನು ಆಯಾ ಪಾತ್ರಗಳ ಬಾಯಲ್ಲಿ ಹೇಳಲಿಚ್ಚಿಸಿ ಕಾಳಿದಾಸ ಮಹಾಕವಿಯ 'ಶಾಕುಂತಲ' ನಾಟಕವನ್ನು ಕನ್ನಡೀಕರಿಸಿದರು. ಜಾನಪದ ರಂಗಭೂಮಿಯ ವೈಶಿಷ್ಟ್ಯ ಚುರಮುರಿಯವರ ಅನುವಾದದಲ್ಲಿ ಚೆನ್ನಾಗಿ ಪ್ರತಿಬಿಂಬಿಸಿದೆ. ಶೈಲಿಯೂ ಕೂಡ ಜಾನಪದ ಶೈಲಿಯಾಗಿದೆ. ಹಾಡು ಪಾರಿಜಾತ, ಹಗಲಾಟಗಳ ಪದ್ಧತಿಯನ್ನೇ ಅನುಸರಿಸಿವೆ. ೧೮೭೪ರಲ್ಲಿ ಶಾಂತಕವಿ(ಸಕ್ಕರೆ ಬಾಳಾಚಾರ್ಯ)ಯವರು ಕೀಚಕವಧೆ, ಬಾಣಾಸುರ, ವಸ್ತ್ರಲಾಪಹರಣ ಮೊದಲಾದ ನಾಟಕಗಳನ್ನು ಬರೆದು ಆಡಿಸಲಾರಂಭಿಸಿದರು. ದೊಂಡೋನರಸಿಂಹಮುಳಬಾಗಲ ಅವರು ಮೃಚ್ಛಕಟಿಕ, ಉತ್ತರರಾಮ ಚರಿತೆ, ಮಾಳವಿಕಾಗ್ನಿಮಿತ್ರ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿದರು. ಸಾಂಗಲಿ ನಾಟಕ ಮಂಡಳಿಯೊಂದು ಮೈಸೂರಿಗೆ ಬಂದಿತು. ಅವರು ಆಡುತ್ತಿದ್ದ ನಾಟಕಗಳನ್ನೂ, ೧೮೭೮ ರಲ್ಲಿ ಮೈಸೂರಿಗೆ ಬಂದ ಪಾರ್ಸಿ ಕಂಪನಿಯೊಂದರ ನಾಟಕಗಳನ್ನು ನೋಡಿದ ದಿವಾನ್ ರಂಗಾಚಾರ್ಯ, ಅಂಬಲೆ ನರಸಿಂಹಯ್ಯಂಗಾರ್ಯರೂ ರಾಜಧಾನಿಯಲ್ಲಿನ ವಿದ್ವಾಂಸರ ಸಭೆ ಸೇರಿಸಿ ನಾಟಕಗಳ ರಚನೆಗೆ ಮನಸ್ಸುಗೊಡುವಂತೆ ಪ್ರೇರೇಪಿಸಿದರು.

೧೮೮೨ ರಲ್ಲಿ ಬಸವಪ್ಪಶಾಸ್ತ್ರಿಗಳು ಕಾಳಿದಾಸನ 'ಶಾಕುಂತಲ' ನಾಟಕವನ್ನು ಕನ್ನಡಕ್ಕೆ ಅನುವಾದಿಸಿಕೊಡಲು ಅದನ್ನು ಅಭಿನಯಿಸಲು 'ಶಾಕುಂತಲ ನಾಟಕದ ಕಂಪನಿ' ಎಂಬ ಮಂಡಳಿಯನ್ನು ಸ್ಥಾಪಿಸಿದರು. ಮೈಸೂರಿನಲ್ಲಿ ಕನ್ನಡ ನಾಕಟಗಳ ಹುಟ್ಟಿಗೆ ಬಸವಪ್ಪಶಾಸ್ತ್ರಿಗಳವರ 'ಶಾಕುಂತಲ' ಕಾರಣವಾಯಿತು. ಶ್ರೀಮನ್ ಮಹಾರಾಜರವರು ಸಿ.ಸುಬ್ಬರಾಯರ ನೆರವು ಕೊಟ್ಟು ಬಸವಪ್ಪಶಾಸ್ತ್ರಿಗಳಿಂದ ಶೇಕ್ಸ್‌ಪೀಯರ್‌ನ ಒಥೆಲೋ ನಾಟಕವನ್ನು (ಶೂರಸೇನ ಚರಿತ್ರೆ), ಜಯರಾಮಾಚಾರ್ಯರ ಸಹಾಯದಿಂದ ಎ.ಆನಂದರಾಯರು 'ರೋಮಿಯೋ ಅಂಡ್ ಜೂಲಿಯಟ್' (ರಾಮವರ್ಮ ಲೀಲಾವತಿ), ಮರ್ಚೆಂಟ್ ಆಫ್ ವೆನಿಸ್ (ಪಾಂಚಾಲಿ ಪರಿಣಯ), ಹ್ಯಾಲೆಂಟ್ (ಹೇಮಂತರಾಜ ವಿಲಾಸ) ಮೊದಲಾದ ಇಂಗ್ಲೀಷ್ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿದರು. ಉತ್ತರ ಕರ್ನಾಟಕ ಹಾಗೂ ಮೈಸೂರು ಕರ್ನಾಟಕಗಳಲ್ಲಿ ಅನುವಾದಿತ ಸಂಸ್ಕೃತ ಇಂಗ್ಲೀಷ್ ನಾಟಕಗಳು ಕನ್ನಡ ರಂಗಭೂಮಿಯನ್ನು ಸೆರೆ ಹಿಡಿದವು.

ಕನ್ನಡ ರಂಗಭೂಮಿಯ ಮೇಲೆ ಸ್ವತಂತ್ರ ನಾಟಕವನ್ನು ತಂದ ಕೀರ್ತಿ ನಾಟಕ ಶಿರೋಮಣಿ ವರದಾಚಾರ್ಯರಿಗೆ ಸೇರಬೇಕು. ೧೯೦೩ ರಲ್ಲಿ ಅವರ ಪ್ರೇರಣೆಯಿಂದ ರಾಜಕವಿ ತಿರುಮಲೆ ಶ್ರೀನಿವಾಸ ಅಯ್ಯಂಗಾರರು 'ಪ್ರಹ್ಲಾದ ಚರಿತ್ರೆ' ನಾಟಕವನ್ನು ಬರೆದರು. ವರದಾಚಾರ್ಯರು ಶಾಕುಂತಲ, ರತ್ನಾವಳಿ, ರಾಮವರ್ಮ ಲೀಲಾವತಿ ನಾಟಕಗಳನ್ನಲದೆ ರೇನಾಲ್ಡ್ಸ್‌ನ 'ರಾಬರ್ಟ್ ಮ್ಯಾಕೇರ್' ಕಾದಂಬರಿಯ ಕನ್ನಡ ಅನುವಾದ 'ನಿರುಪಮಾ' ನಾಟಕವನ್ನೂ, ರೆನಾಲ್ಡ್ಸ್‌ನ 'ಸರ್‌ಕೆನೆತ್' ಕಾದಂಬರಿಯ ಅನುವಾದವಾದ 'ಕಾಮಪಾಲ' ನಾಟಕವನ್ನು ರಂಗಭೂಮಿಯ ಮೇಲೆ ತಂದರು. ವಿಷ್ಣುಲೀಲಾ, ಧ್ರುವಚರಿತ್ರೆ, ಭಕ್ತ ಅಂಬರೀಷ, ವಿರಾಟಪರ್ವ, ಸಂಪೂರ್ಣ ರಾಮಾಯಣ, ಮಹಾಭಾರತ ಮೊದಲಾದ ಸ್ವತಂತ್ರ ನಾಟಕಗಳನ್ನೂ ಆಡುತ್ತಿದ್ದರು. 'ಸರ್‌ಡಬ್' ಎನ್ನುವ ಸ್ವರಕಪೋಲಕಲ್ಪಿತ ಸಾಮಾಜಿಕ ಪ್ರಹಸನವನ್ನು ವರದಾಚಾರ್ಯರು ಅಭಿನಯಿಸುತ್ತಿದ್ದರು.

ವಿನೋದ ರತ್ನಾಕರ ಗುಬ್ಬಿವೀರಣ್ಣನವರ ಪ್ರೋತ್ಸಾಹದಿಂದ ಆಸ್ಥಾನ ವಿದ್ವಾನ್ ಬೆಳ್ಳಾವೆ ನರಹರಿಶಾಸ್ತ್ರಿಗಳು ಅನೇಕ ಸ್ವತಂತ್ರ ಪೌರಾಣಿಕ ನಾಟಕಗಳನ್ನು ಬರೆದರು. ಅದೇ ಕಾಲಕ್ಕೆ ನಂಜನಗೂಡು ಶ್ರೀಕಂಠಶಾಸ್ತ್ರಿಗಳವರು ಶಾಕುಂತಲಾ ನಾಟಕ ಸಭಾ, ಚಾಮುಂಡೇಶ್ವರಿ ನಾಟಕ ಮಂಡಳಿಗೆ ಕೆಲವು ಸ್ವತಂತ್ರ ಪೌರಾಣಿಕ ನಾಟಕಗಳನ್ನು ಬರೆದು ಕೊಟ್ಟರು. ಉತ್ತರ ಕರ್ನಾಟಕದಲ್ಲಿ ಮರಾಠಿ ನಾಟಕಗಳನ್ನು ಆಧಾರವಾಗಿಟ್ಟುಕೊಂಡು ವಾಮನರಾಯರು ಕೆಲವು ನಾಟಕಗಳನ್ನು ಬರೆದರು. ನಾಟಕಾಲಂಕಾರ ಗರೂಡ ಸದಾಶಿವರಾಯರು ರಾಜಕೀಯ ಛಾಯೆ ತೋರುವ ಅನೇಕ ಪೌರಾಣಿಕ ನಾಟಕಗಳನ್ನು ಬರೆದರು. ಈ ಕಾಲವನ್ನು ಪೌರಾಣಿಕ ಯುಗ ಎಂದು ಕರೆಯಬಹುದು. ವರದಾಚಾರ್ಯರಂತವರು ಕೂಡ ಪುರಾಣದ ಶೃಂಖಲೆಯಿಂದ ಬಿಡುಗಡೆ ಹೊಂದಲಿಲ್ಲ. ರಾಜಕೀಯ ತತ್ವ ಪ್ರಚಾರಕ್ಕೆ ಹೊರಟ ಗರುಡ ಸದಾಶಿವರಾಯರ ನಾಟಕಗಳು ಪುರಾಣಗಳ ಮರೆಹೋಗಬೇಕಾಯಿತು. ಉತ್ತರ ಕರ್ನಾಟಕದ ಕೆಲವು ನಾಟಕ ಮಂಡಳಿಗಳು ಈ ಶತಮಾನದ ಮೂರನೆಯ ದಶಕದಲ್ಲಿ ರಾಣಿ ಚೆನ್ನಮ್ಮ, ರುದ್ರಮ್ಮ, ಜಾನ್ಸಿ ಲಕ್ಷ್ಮೀಬಾಯಿ, ಸಖೂಬಾಯಿ ಮೊದಲಾದ ಐತಿಹಾಸಿಕ ನಾಟಕಗಳನ್ನಾಡಲು ಆರಂಭಿಸಿದರು. ಆದರೆ ಸಾಮಾಜಿಕ ನಾಟಕಗಳ ಕಡೆ ಯಾರ ಲಕ್ಷವೂ ಹೋಗಲಿಲ್ಲ. ಸದಾಶಿವರಾಯರು, ವರದಾಚಾರ್ಯ, ಮಂಗಳೂರಿನ ರಂಗನಾಥಭಟ್ಟರ ಒಂದೆರಡು ಮರಾಠಿ ಸಾಮಾಜಿಕ ನಾಟಕಗಳು ಇವುಗಳನ್ನು ಬಿಟ್ಟರೆ ರಂಗಮಂದಿರಕ್ಕೆ ಸಾಮಾಜಿಕ ನಾಟಕ ಕಾಲಿಡಲಿಲ್ಲ.

ಇಪ್ಪತ್ತನೆಯ ಶತಮಾನದ ಆದಿಯಲ್ಲಿ ನಾಟಕಕ್ಕೆ ಕನ್ನಡ ನಾಡಿನಲ್ಲಿ ವಿಶೇಷ ಪ್ರೋತ್ಸಾಹ ಸಿಕ್ಕಿತು. ಇದಕ್ಕೆ ವರದಾಚಾರ್ಯರು, ವೀರಣ್ಣನವರು, ಮಹಮದ್ ಪೀರ್, ಗರೂಡ ಸದಾಶಿವರಾಯರು, ರಂಗನಾಥ ಭಟ್ಟರು ಮೊದಲಾದ ವರನಟರ ಪ್ರತಿಭೆಯೇ ಕಾರಣ. ಇವರೆಲ್ಲರ ಪ್ರಭಾವ ಮತ್ತು ಸಂಸ್ಕೃತ, ಇಂಗ್ಲೀಷ್, ಮರಾಠಿ, ತೆಲುಗು ಮುಂತಾದ ಪ್ರಾಂತೀಯ ಭಾಷೆಗಳಲ್ಲಿ ರಚಿತವಾದ ಸ್ವತಂತ್ರ ನಾಟಕ,

ಅನುವಾದ ನಾಟಕಗಳಿಂದ ಪ್ರಭಾವಿತರಾಗಿ ನಾಟಕಕಾರನ ಗೌಣಸ್ಥಾನವನ್ನು ಬದಲಾಯಿಸಿ ಅವನನ್ನು ರಂಗಮಂದಿರದ ಪ್ರಧಾನ ವ್ಯಕ್ತಿಯನ್ನಾಗಿ ಮಾಡಿ, ನಾಟಕದಲ್ಲಿ ಸಾಮಾಜಿಕ ನಾಟಕಗಳ ಯುಗವನ್ನಾರಂಭಿಸಿದ ಕೀರ್ತಿ ಕೈಲಾಸಂ ಅವರಿಗೆ ಸಲ್ಲುತ್ತದೆ. ನಾಟಕದ ಕಲ್ಕಿಯಾಗಿ ಕೈಲಾಸಂ ಕನ್ನಡ ರಂಗಭೂಮಿಯನ್ನು ೧೯೧೯ ರಲ್ಲಿ ಪ್ರವೇಶಿಸಿದರು. ಇಲ್ಲಿಂದ ಕೈಲಾಸಂ ಜೊತೆಗೆ ಬಿ.ಎಂ.ಶ್ರೀ., ಕುವೆಂಪು, ಬೇಂದ್ರೆ, ಮಾಸ್ತಿ, ರಾಜರತ್ನಂ, ಶ್ರೀರಂಗ, ಸಂಸ, ಪು.ತಿ.ನ., ಕಾರಂತ, ರಂ.ಶ್ರೀ. ಮುಗಳಿ, ಮೊದಲಾದವರು ನವೋದಯ ನಾಟಕಕಾರರಾಗಿದ್ದರು. ಅ.ನ.ಕೃ., ತ.ರಾ.ಸು., ನಿರಂಜನ ಅರ್ಚಕ, ವೆಂಕಟೇಶ ಕಟ್ಟೀಮನಿ, ಚದುರಂಗ, ಪ್ರಗತಿಶೀಲ ನಾಟಕಕಾರರಾಗಿದ್ದರು. ಪಿ. ಲಂಕೇಶ, ಕಾರ್ನಾಡ, ಕಂಬಾರ, ತೇಜಸ್ವಿ, ಚಂಪಾ, ನ.ರತ್ನ, ಗೋಕಾಕ ಮೊದಲಾದವರು ನವ್ಯ ಸಾಹಿತ್ಯ ಸಂದರ್ಭದಲ್ಲಿ ನಾಟಕಕಾರರಾಗಿದ್ದರು. ಮ.ನ.ಜ., ಸಿದ್ಧಲಿಂಗಯ್ಯ, ಬುದ್ದಣ್ಣ ಹಿಂಗಮಿರೆ, ಸತ್ಯಾನಂದ ಪಾತ್ರೋಟ ಮೊದಲಾದವರನ್ನೊಳಗೊಂಡಂತೆ ಇತ್ತೀಚಿನ ಯುವ ಬರಹಗಾರರು ಕೂಡಾ ನಾಟಕಗಳನ್ನು ರಚಿಸಿ ಅವುಗಳನ್ನು ರಂಗದ ಮೇಲೆ ಪ್ರಯೋಗಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ.

ಒಟ್ಟಾರೆ ಕನ್ನಡ ನಾಟಕಗಳ ಪ್ರಾಚೀನತೆಯನ್ನು ಮೇಲೆ ಹೇಳಿದ ವಿವರಗಳಿಂದ ಅದರ ಹುಟ್ಟು ಮತ್ತು ಬೆಳವಣಿಗೆಯನ್ನು ಹಲ್ಮಿಡಿ ಶಾಸನ ಮತ್ತು ಕವಿರಾಜಮಾರ್ಗದಿಂದ ಗುರುತಿಸಲಾಗಿದೆ.

**ಆಧಾರ ಗ್ರಂಥಗಳು**


1. ಎಂ. ಚಿದಾನಂದ ಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.
2. ಎಂ.ಎಂ. ಕಲಬುರ್ಗಿ : ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ.
3. ಕೆ.ಎಲ್. ನರಸಿಂಹಶಾಸ್ತ್ರಿ : ಆದಿಪುರಾಣಂ
4. ಬಿ.ಎಂ.ಶ್ರೀ. : ಗದಾಯುದ್ಧ ಸಂಗ್ರಹಂ
5. ಕುಮಾರವ್ಯಾಸನ : ಕನ್ನಡ ಭಾರತ / ಗದುಗಿನ ಭಾರತ
6. ಜಿ.ಎಸ್. ಶಿವರುದ್ರಪ್ಪ : ಕನ್ನಡ ನಾಟಕ ಪರಂಪರೆ ಮತ್ತು ಪ್ರಯೋಗ
7. ಕೆ. ಮರುಳಸಿದ್ದಪ್ಪ : ಆಧುನಿಕ ಕನ್ನಡ ನಾಟಕ
8. ತ.ಸು. ಶಾಮರಾಯ : ಕನ್ನಡ ನಾಟಕ